ಶ್ರೀ ಬಿ. ಮುನಿಯಪ್ಪ : ನಾನು ಪೂರ್ತಿ ಮಾತನಾಡಿಬಿಟ್ಟರೆ ತಮಗೇ ಅರ್ಥವಾಗುತ್ತದೆ. ನನಗೆ ಒಂದು ನಿಮಿಷ ಅವಕಾಶ ಕೊಡಿ. ಹಚ್ಚುನಾಯಿಗಳಿಂದ ತಪ್ಪಿಸಿಕೊಂಡು ಹೋಗುವುದು ನಮಗೆ ಕಷ್ಟ ಆಗುತ್ತಾ ಇಲ್ಲ. ಇವತ್ತು ಮಧ್ಯಾಹ್ನ 3 ಗಂಟೆಗೆ ಪ್ರೆಸ್ ಕ್ಲಬ್‌ಗೆ ಒಂದು ಹುಚ್ಚುನಾಯಿ ಬರುತ್ತಾ ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಸನ್ಮಾನ್ಯ ಅಧ್ಯಕ್ಷರೇ, 8.4.95ರಂದು ಶಿವಮೊಗ್ಗದಲ್ಲಿ ಒಂದು ಕಾರ್ಯಕ್ರಮವಾಗಿ, ಈ ಕಾರ್ಯಕ್ರಮದ ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಸುಬ್ರಹ್ಮಣ್ಯಸ್ವಾಮಿ ಅವರ ಬಗ್ಗೆ ಅಭಿಪ್ರಾಯ ವ್ಯತ್ಯಾಸ ಇರಬಹುದು. ಆದರೆ, ಅಧ್ಯಕ್ಷರ ಆದೇಶದ ಮೇರೆಗೆ ತೆಗೆದು ಹಾಕಲಾಗಿದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಅದು ಯಾರೇ ಇರಬಹುದು ...

Mr. Speaker : I will get the records ....

ಶ್ರೀ ಬಿ. ಮುನಿಯಪ್ಪ : ಅವರು ಈ ದೇಶದಲ್ಲಿ ಕಾಂಗ್ರೆಸ್ ಪಕ್ಷ ಅಲ್ಲದೇ ಇರುವ ರಾಜ್ಯದಲ್ಲಿ ಯಾರೂ ಆಳಬಾರದು ಅಂತ ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಹಾಗೆ ಹೇಳುವುದು ಸರಿಯಲ್ಲ.

Mr. Speaker : I will get the records and examine. Whatever is not in good taste, it will not be placed on records.

(2) ಸರ್ಕಾರಿ ಕಾರ್ಯಕ್ರಮಗಳಲ್ಲಿ ಶಾಸಕರಿಗೆ ಪ್ರತಿನಿಧ್ಯ.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೇ, 8.4.1995ರಂದು ಶಿವಮೊಗ್ಗದಲ್ಲಿ ಒಂದು ಕಾರ್ಯಕ್ರಮವಾಯಿತು. ಆ ಕಾರ್ಯಕ್ರಮದ ವ್ಯವಸ್ಥೆಯಿಂದ ಮನಸ್ಸಿಗೆ ನೊಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದು ಒಂದು ಅಭೂತಪೂರ್ವವಾದಂಥ ಕಾರ್ಯಕ್ರಮ. ಕುವೆಂಪು ರಂಗಮಂದಿರದ ಉದ್ಘಾಟನೆ. ನಾನು ಈ ರಂಗಮಂದಿರ ತಯಾರಾಗುವುದಕ್ಕೆ ಕಳೆದ ಆರು ವರ್ಷಗಳಿಂದ ಸತತವಾಗಿ ಹೋರಾಟ ಮಾಡಿದ್ದೇನೆ.

ಅಧ್ಯಕ್ಷರು : ಒಂದು ನಿಮಿಷ. ನಾನು ನಿಮ್ಮ ನೆರವಿಗೆ ಬರುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಒಂದು ನಿಮಿಷದಲ್ಲಿ ನಾನು ಹೇಳಿಬಿಡುತ್ತೇನೆ. ನಾನು ಆರು ವರ್ಷ ಕಾಲ ಹೋರಾಟ ಮಾಡಿ ಈ ರಂಗಮಂದಿರ ನಿರ್ಮಾಣವಾಯಿತು. ಅಂದು ಈ ಕಾರ್ಯಕ್ರಮವಾದ ನಂತರ ನಾನು ಮತ್ತು ಮುಖ್ಯಮಂತ್ರಿಗಳ ಇಬ್ಬರ ಹೆಸರುಗಳು ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ರೀತಿಯಲ್ಲಿ ಚರ್ಚೆಗೆ ವಸ್ತುವಾಗಿಬಿಟ್ಟಿವೆ. ನಾನು ಸ್ಥಳೀಯ ಶಾಸಕನಾಗಿರುವಾಗ ಈ ರಂಗಮಂದಿರದ ಬಗ್ಗೆ ಒಂದು ಜಾಹೀರಾತನ್ನು ಕೊಟ್ಟಿದ್ದಾರೆ. ಅದರಲ್ಲಿ ಸ್ಥಳೀಯ ಶಾಸಕನಾಗಿ ನನ್ನ ಹೆಸರೇ ಇಲ್ಲ. ನಾನು ಬಿ.ಜೆ.ಪಿ. ಶಾಸಕನಾಗಿದ್ದೇ ತಪ್ಪೆ ? ನನಗಂತೂ ಇದು ಅರ್ಥವಾಗುತ್ತಿಲ್ಲ. ಸ್ಥಳೀಯ ಶಾಸಕರಿಗೆ ಪ್ರತಿಯೊಂದು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ ಎಂದು ಮುಖ್ಯ ಮಂತ್ರಿಗಳು ಹೇಳುತ್ತಾರೆ. ಶಾಸಕರಿಗೆ ಹೆಚ್ಚು ಸ್ಥಾನಮಾನ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಪ್ರತಿನಿತ್ಯ ಪತ್ರಿಕೆಗಳಲ್ಲಿ

ನೋಡುತ್ತಿದ್ದೇವೆ. ಆದರೆ ಇದನ್ನು ಸ್ವತಃ ನಾನು ಅನುಭವಿಸಿ, ನೊಂದು ತಮ್ಮ ಹತ್ತಿರ ಬಂದು ಹೇಳುತ್ತಿದ್ದೇನೆ. ನನ್ನ ಹೆಸರನ್ನು ಏಕೆ ಕೈಬಿಟ್ಟರು ? ನಾನು ಇಲ್ಲಿ ಬಿ.ಜೆ.ಪಿ. ಶಾಸಕನಾಗಿ ಕುಳಿತದ್ದು ನನ್ನ ತಪ್ಪೆ ?

ಅಧ್ಯಕ್ಷರು : ದಯವಿಟ್ಟು ಒಂದು ನಿಮಿಷ ಕುಳಿತುಕೊಳ್ಳಿ. ತಾವು ನಿನ್ನೆ ಬಂದು ನನ್ನ ಹತ್ತಿರ ಹೇಳಿದ ಮೇಲೆ ನಾನು ಇನ್‌ಫಾರ್ಮೇಶನ್ ಡೈರೆಕ್ಟರ್ ಅವರನ್ನು ಕರೆಯಿಸಿದ್ದೆ. ಕರೆಯಿಸಿ ಅವರಿಂದ ವಿವರಣೆಯನ್ನು ಪಡೆದೆ. ಇನ್‌ಫಾರ್ಮೇಶನ್ ಡೈರೆಕ್ಟರ್ ಅವರು ಹೇಳಿದರು, ಇದರಲ್ಲಿ ನನ್ನದೇನೂ ಕೈವಾಡ ಇಲ್ಲ. ಇದು ನನಗೆ ಸಂಬಂಧಪಟ್ಟಿದುದ್ದು ಅಲ್ಲ. ಶಿವಮೊಗ್ಗದ ಜಿಲ್ಲಾಧಿಕಾರಿಗಳಿಂದ ಈ ಒಂದು ಲೋಪವಾಗಿದೆಯೆಂದು ಅವರು ಹೇಳಿದರು. ನಿಮ್ಮ ನೋವನ್ನು ನಾನು ಅರ್ಥಮಾಡಿಕೊಂಡಿದ್ದೇನೆ.

* ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಇಲ್ಲಿ ನೋಡಿ. ಮಾನ್ಯ ಈಶ್ವರಪ್ಪನವರು ಈಗ ವಿಷಯವನ್ನು ಪ್ರಸ್ತಾಪಮಾಡಿದರು. ನನಗೆ ಗೊತ್ತಿರುವ ಹಾಗೆ ಮುಖ್ಯಮಂತ್ರಿಗಳು ಇಲ್ಲಿ ಅಧಿಕಾರಿಗಳ ಸಭೆ ಕರೆದು, ಶಾಸಕರ ಸಭೆಯಲ್ಲಿ ಕರೆಯಿಸಿ ಹೇಳಿದ್ದಾರೆ. ಯಾವುದೇ ಸರ್ಕಾರಿ ಕಾರ್ಯಕ್ರಮವನ್ನು ಮಾಡಬೇಕಾದರೆ ಸಂಬಂಧಪಟ್ಟ ಶಾಸಕರನ್ನು ನೀವು ಕೇಳದೇ, ಅವರನ್ನು ಜೊತೆಗೆ ಸೇರಿಸದೇ, ಯಾವುದೇ ಕಾರ್ಯಕ್ರಮವನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆಂಬ ಮಾತನ್ನು ಮುಖ್ಯಮಂತ್ರಿಗಳು ಹೇಳಿದ್ದಾರೆ ಎಂಬುದು ನನ್ನ ಕಿವಿಗೆ ಬಿದ್ದಿದೆ. ಆದರೆ ಮಾನ್ಯ ಈಶ್ವರಪ್ಪನವರು ನಮ್ಮ ಪಕ್ಷದ ರಾಜ್ಯದ ಅಧ್ಯಕ್ಷರು ಮತ್ತು ಅಲ್ಲಿ ಶಾಸಕರಾಗಿ ಯಾವ ಒಂದು ಕಲಾಮಂದಿರ ಆಗಬೇಕೆಂದು ಹೋರಾಟ ಮಾಡಿದರೋ, ಅವರ ಹೆಸರನ್ನೋ ಬಿಟ್ಟಿದ್ದಾರೆ. ನೀವು ಪತ್ರಿಕೆಯಲ್ಲಿ ಅಡ್ವರ್ಟೈಸ್‌ಮೆಂಟ್ ಕೊಡುತ್ತೀರಿ, ಕಾರ್ಯಕ್ರಮದಲ್ಲಿ ವಿಶೇಷ ಆಹ್ವಾನಿತರು ಎಂದು ಮೂಲೆಯಲ್ಲಿ ಹಾಕುತ್ತೀರಿ, ಆದರೆ ಅದು ಪತ್ರಿಕೆಯಲ್ಲಿ ಪ್ರಚಾರ ಆಗುವುದಿಲ್ಲ. ಅಂದರೆ ಇದರಲ್ಲಿ ಯಾವ ಅಧಿಕಾರಿಗಳಿಗೂ ಸಂಬಂಧ ಇಲ್ಲ, ಯಾರದ್ದೂ ಕೈವಾಡ ಇಲ್ಲವೆಂದರೆ, ಏಕೆ ಇದೊಂದು ರಾಜಕೀಯ ಪ್ರೇರಣೆ ಇದೆ ಎಂದು ನಾವು ತಿಳಿದುಕೊಳ್ಳಬೇಕೇ ? ನಾನು ಇದನ್ನು ತಮಗೆ ಕಳಿಸುತ್ತೇನೆ. ಇನ್ನೊಂದು ಇಲ್ಲಿ ನಮ್ಮ ವಿಶ್ವೇಶ್ವರ ಹೆಗಡೆಯವರು, ವಲಯ ಸಾಕ್ಷರತಾ ಸಮಿತಿಯ ಒಂದು ಕಾರ್ಯಕ್ರಮ ಗ್ರಾಮಪಂಚಾಯತಿ, ನೆಗ್ಲು, ಜನ್ಮನೆ, ಇಲ್ಲಿ ಆಗಿದೆ. ಸನ್ಮಾನ್ಯ ಅಧ್ಯಕ್ಷರೇ, ಅಲ್ಲಿ ಅಧ್ಯಕ್ಷರನ್ನು ಕರೆಯುತ್ತಾರೆ. ಅವರು ಪ್ರಮೋದ್ ಹೆಗಡೆ ಎಂದು ಹೇಳಿ ಜನತಾದಳದ ಮುಖಂಡರು. ಮತ್ತು ರೇವಣಪ್ಪ ಮತ್ತು ಸಹಾಯಕ ವಿಭಾಗಾಧಿಕಾರಿ ಅವರು ಹೋಗುತ್ತಾರೆ. ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಎಲ್ಲರೂ ಸರ್ಕಾರದ ಒಂದು ಕಾರ್ಯಕ್ರಮಕ್ಕೆ ಹೋಗುತ್ತಾರೆ. ಆದರೆ ಅಲ್ಲಿರುವಂತಹ ಶಾಸಕ ವಿಶ್ವೇಶ್ವರ ಹೆಗಡೆಯವರನ್ನು ಕಾರ್ಯಕ್ರಮಕ್ಕೆ ಕರೆಯುವುದಿಲ್ಲ. ಅಂದರೆ ನಾನು ತಮ್ಮನ್ನು ಕೇಳುವಂಥಾದ್ದು, ಹಾಸ್ಯಾಸ್ಪದವಾಗುತ್ತದೆ. ಒಂದು ಸಾರಿ ಮುಖ್ಯಮಂತ್ರಿಗಳು ಹೇಳಿದಮೇಲೆ, ನಾನು ಸುತ್ತೋಲೆಯನ್ನು ಕಳಿಸಿದ್ದೇನೆ ಎಂದು ಹೇಳಿದ್ದಾರೆ. ಇಲ್ಲಿ ಸುತ್ತೋಲೆಯನ್ನು ಕಳಿಸಬೇಕಾದ ಅವಶ್ಯಕತೆ ಇಲ್ಲ. ಇದು ನಡೆದುಕೊಂಡು ಬಂದಿರುವಂಥ ಪದ್ಧತಿ. ಪ್ರತಿಯೊಂದು ಸರ್ಕಾರಿ ಕಾರ್ಯಕ್ರಮದಲ್ಲಿ ಅಲ್ಲಿರುವಂಥ

ಶಾಸಕ ಅಧ್ಯಕ್ಷತೆಯನ್ನು ವಹಿಸುತ್ತಾರೆ. ಯಾವುದೋ ವಿಶೇಷವಾದ ಕಾರಣಕ್ಕೋಸ್ಕರ ಯಾರೋ ಇನ್ನೊಬ್ಬರು, ಮಂತ್ರಿಗಳು ಬರುತ್ತಾರೆ ಎಂದರೆ ನಮ್ಮದೇನೂ ಅಭ್ಯಂತರ ಇಲ್ಲ. ಇವತ್ತು ಇಂತಹ ಐದಾರು ಉದಾಹರಣೆಗಳನ್ನು ಕೊಡುತ್ತೇನೆ. ಅನೇಕ ಜನ ಶಾಸಕರು ಪ್ರಸ್ತಾಪ ಮಾಡಿದ್ದಾರೆ. ನಾನು ಹೇಳುವುದೇನೆಂದರೆ ಇದು ಯಾರಿಗೂ ಗೌರವ ತರುವ ಸಂಗತಿ ಅಲ್ಲ. ಬಿ.ಜೆ.ಪಿ. ಶಾಸಕರಿಗೆ ಮಾತ್ರ ಈ ರೀತಿ ಆದರೆ, ನಾವು ಏನು ತಿಳಿದುಕೊಳ್ಳಬೇಕು ? ಇದರಿಂದ ಯಾರಿಗೆ ಗೌರವ ಬರುತ್ತದೆ ? ಮುಖ್ಯಮಂತ್ರಿಗಳು ಆ ಕಾರ್ಯಕ್ರಮಕ್ಕೆ ಹೋಗಿರಲ್ಲಿಲ್ಲ. ಅದು ನನಗೆ ಗೊತ್ತಿದೆ. ಆದರೆ ಆ ಅಧಿಕಾರಿ ತಪ್ಪು ಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೋ ? ಆ ಅಧಿಕಾರಿ ಮನಬಂದಂತೆ ಮಾಡಬಹುದೇ ? ಅಧಿಕಾರಿಗಳಿಗೆ ತೃಪ್ತಿಪಡಿಸುವುದಕ್ಕೋಸ್ಕರ ಈ ಕಾರ್ಯಕ್ರಮ ಮಾಡಿಸುತ್ತಿದ್ದಾರೆ ಎಂದು ನಾವು ಭಾವಿಸಬೇಕೇ ? ಅಥವಾ ಅಧಿಕಾರಿಗಳ ಮನಸ್ಸಿನಲ್ಲಿ ಸ್ಥಳೀಯ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬಾರದು ಅಂತ ಅನ್ನಿಸಿದೆಯೇ ? ಅದು ಯಾರಿಗೂ ಗೌರವ ತರತಕ್ಕಂಥ ಸಂಗತಿ ಅಲ್ಲ. ಮತ್ತೆ ಇದು ರಿಪೀಟ್ ಆಗದಂತೆ ನೋಡಿಕೊಳ್ಳುತ್ತೇನೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಈಗ ತಾನೆ ಸನ್ಮಾನ್ಯ ವಿರೋಧಪಕ್ಷದ ನಾಯಕರು ನನಗೆ ಪತ್ರಿಕೆಯಲ್ಲಿ ಕೊಟ್ಟಿರತಕ್ಕಂಥ ಒಂದು ಪ್ರಕಟಣೆ ಏನಿದೆ, ಆದರ ಒಂದು ನಕಲನ್ನು ಕಳಿಸಿಕೊಟ್ಟಿದ್ದಾರೆ. ಇದು ಕರ್ನಾಟಕ ವಾರ್ತೆಯಲ್ಲಿ ಬಹುಶಃ ಇನ್‌ಫರ್ಮೇಶನ್ ಡಿಪಾರ್ಟ್‌ಮೆಂಟ್‌ನಿಂದ ಕೊಟ್ಟಿರತಕ್ಕಂಥಾದ್ದು. ಇದರಲ್ಲಿ ಸನ್ಮಾನ್ಯ ಶಾಸಕರು ಮತ್ತು ಬಿ.ಜೆ.ಪಿ. ಅಧ್ಯಕ್ಷರಾಗಿರತಕ್ಕಂಥ ಶ್ರೀಮಾನ್ ಈಶ್ವರಪ್ಪ ಅವರ ಹೆಸರು ಇಲ್ಲ. ನಾನು ಇದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ. ಇದು ಸರಿಯಲ್ಲ. ಇಷ್ಟೇ ಅಲ್ಲ, ಯಾವುದೇ ಸರ್ಕಾರಿ ಕಾರ್ಯಕ್ರಮದಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಅಲ್ಲಿ ಸ್ಥಾನಮಾನ ಕೊಡದೇ ಇದ್ದರೆ, ಅಧಿಕಾರಿಗಳ ಮೇಲೆ ಅವರು ಯಾರು ಆ ಕಾರ್ಯಕ್ರಮವನ್ನು ವ್ಯವಸ್ಥೆ ಮಾಡುತ್ತಾರೆ ಅಂತಹವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳುವುಕ್ಕೆ ನಾನು ಸಿದ್ಧನಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅಭಿನಂದನೆಗಳು.

ಶ್ರೀ.ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ವಿರೋಧಪಕ್ಷದ ಮುಖಂಡರು ಮತ್ತು ವಾಟಾಳ್ ನಾಗರಾಜ್‌ರವರು ಸೊಳ್ಳೆ ಮತ್ತು ಹುಚ್ಚುನಾಯಿಗಳ ಬಗ್ಗೆ ಹೇಳಿದರು.

ಅಧ್ಯಕ್ಷರು : ಅದು ಆಯಿತಲ್ಲ, ಅದು ಮುಗಿದುಹೋಯಿತು.

ಶ್ರೀ.ಜಿ.ವಿ. ಶ್ರೀರಾಮರೆಡ್ಡಿ : ನಮ್ಮ ಜಿಲ್ಲೆಯಲ್ಲಿ ಹಾವುಗಳ ಕಾಟ ಹೆಚ್ಚಾಗಿ ಬಿಟ್ಟಿದೆ. ಭಾರಿ ಭಯಂಕರ ಹಾವುಗಳು ಇವೆ. ಸರ್ಕಾರ ಹಾವುಗಳನ್ನು ಹಿಡಿಯಬಾರದು ಎಂದು ಹೇಳಿ ಬ್ಯಾನ್ ಮಾಡಿದೆ. ಅಲ್ಲಿ ಹಾವು ಕಚ್ಚಿಬಿಟ್ಟರೆ ನಮ್ಮ ಆಸ್ಪತ್ರೆಗಳಲ್ಲಿ ಪರಿಸ್ಥಿತಿ ಹೇಗೆ ಇದೆಯೆಂದರೆ, ಹಾವು ಕಚ್ಚಿದರೆ ಕೊಡಲಿಕ್ಕೆ ಅಲ್ಲಿ ಔಷಧಿ ಇಲ್ಲ. ಅದು ಒಂದು ಇಂಜೆಕ್ಷನ್‌ಗೆ ಇನ್ನೂರು ರೂಪಾಯಿ ಆಗುತ್ತದೆ. ಬಡವರು ಕಾಡುಗಳಲ್ಲಿ ಅಲ್ಲಿ ಇಲ್ಲಿ, ಹೊಲಗದ್ದೆಗಳಲ್ಲಿ ಓಡಾಡುವಾಗ ಹಾವುಗಳು ಕಚ್ಚುವ ಸಂಭವ ಇರುತ್ತದೆ. ಆದರೆ ಅವರಿಗೆ ಇನ್ನೂರು ರೂಪಾಯಿ ಕೊಟ್ಟು

ಇಂಜಕ್ಷನ್ ತೆಗೆದುಕೊಳ್ಳುವ ಶಕ್ತಿ ಇರುವುದಿಲ್ಲ. ಎರಡನೆಯದಾಗಿ ಸರ್ಕಾರಿ ಆಸ್ಪತ್ರೆಗೆ ಹೋದರೆ ವಿಷದ ಹಾವಿನಿಂದ ಕಡಿತವಾದರೆ ಔಷಧಿ ಇರುವುದಿಲ್ಲ. ನೀವು ಬೆಂಗಳೂರಿಗೆ ಹೋಗಿಬಿಡಿ ಎಂದು ಅಲ್ಲಿಯ ವೈದ್ಯರು ತಕ್ಷಣ ಹೇಳಿಬಿಡುತ್ತಾರೆ. ಬೆಂಗಳೂರಿಗೆ ಕಾರಿನಲ್ಲಿ ಬರುವುದರೊಳಗೆ ವ್ಯಕ್ತಿ ಸತ್ತು ಹೋಗಿ ಬಿಡುತ್ತಾನೆ. ಸೊಳ್ಳೆ, ಹುಚ್ಚುನಾಯಿ ಕಡಿದರೆ ಮನುಷ್ಯ ಬೇಗ ಸಾಯುವುದಿಲ್ಲ. ಎಲ್ಲರಿಗೂ ಗೊತ್ತಿದೆ ಏನೆಂದರೆ ಹಾವಿನ ವಿಷಭಯಂಕರವಾಗಿರುತ್ತದೆ. ನಮ್ಮ ಜಿಲ್ಲೆಯಲ್ಲಂತೂ ಪ್ರತ್ಯೇಕವಾಗಿ ಹಾವಿನ ಕಡಿತದ ಪ್ರಕರಣಗಳು ಹೆಚ್ಚಾಗಿವೆ. ಇದಕ್ಕೆ ಸರ್ಕಾರ ಹಾವನ್ನು ಹಿಡಿಯಬಾರದು ಎಂದು ಕಾಯಿದೆ ಮಾಡಿದೆ ಹೋಗಲಿ ಹಾವು ಕಡಿದಾಗ ಔಷಧಿ ಸರಬರಾಜು ಮಾಡುತ್ತಾರೆ ಎಂದರೆ ಅದೂ ಕೂಡ ಇಲ್ಲ. ಇದಕ್ಕೆ ಕೊಡುವ ಇಂಜಕ್ಷನ್‌ಗೆ ಎರಡು ನೂರು ರೂಪಾಯಿ ಆಗುತ್ತದೆ. ದಯವಿಟ್ಟು ಸರ್ಕಾರ ಇದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಂಡು ಉತ್ತರ ಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತಮ್ಮ ಜಿಲ್ಲೆಯಲ್ಲಿ ಹಾವುಗಳು ಜಾಸ್ತಿ ಎಂದು ಹೇಳಿದರು. ತಾವು ಕೂಡ ಅದೇ ಜಿಲ್ಲೆಯವರು. ತಮ್ಮ ಅನುಭವ ಏನು ಎಂದು ಗೊತ್ತಾಗಲಿಲ್ಲ. ಹಾವು ಕಡಿತದ ಬಗ್ಗೆ ತಮ್ಮ ಅನುಭವ ಏನು ?

ಅಧ್ಯಕ್ಷರು : ನನಗೆ ಕಡಿಯಲಿಕ್ಕೆ ನಾನು ಊರಿಗೇ ಹೊಗಿಲ್ಲ. ನಾನು ಇಲ್ಲೇ ಇದ್ದುಬಿಟ್ಟಿದ್ದೇನಲ್ಲ !

ಶ್ರೀ ವಾಟಾಳ್ ನಾಗರಾಜ್ : ತಮಗೆ ಗೊತ್ತಿರಬೇಕಲ್ಲ ? ಹಾವಿನ ಕಾಟ ಎಷ್ಟು, ಯಾವ್ಯಾವ ತರಹದ ಹಾವುಗಳು ಇವೆ ಎಂದು ತಾವು ಹೇಳಬೇಕಾಗುತ್ತದೆ.

11.50 ಎ.ಎಂ.

ತಪ್ಪಿಸಿಕೊಂಡಿರತಕ್ಕ ಎರಡು ಹಾವುಗಳನ್ನೇ ಹಿಡಿಯುವುದಕ್ಕಾಗಲಿಲ್ಲ. ಇದನ್ನಾದರೂ ಹಿಡಿಯೋಣವೆಂದು ತಲೆಯಲ್ಲಿ ಬಂತು, ಅದನ್ನೂ ಹಿಡಿಯುವುದಕ್ಕಾಗಲಿಲ್ಲ. ಮತ್ತೆ ಇದನ್ನು ಎಲ್ಲಿ ಹಿಡಿಯುವುದಕ್ಕೆ ಸಾಧ್ಯವಾಗುತ್ತದೆ.

(3) ವೈದ್ಯಕೀಯ ಹಾಗೂ ಇಂಜಿನಿಯರಿಂದ ಪ್ರವೇಶಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆ.

ಶ್ರೀ. ವಿಶ್ವೇಶ್ವರಯ್ಯ : ನಿನ್ನೆಯದಿನ ಪ್ರವೇಶ ಪರೀಕ್ಷೆ ಬಗ್ಗೆ ವಿಷಯ ಪ್ರಸ್ತಾಪವಾದಾಗ ಸನ್ಮಾನ್ಯ ಮುಖ್ಯಮಂತ್ರಿಗಳು, ಪ್ರವೇಶ ಪರೀಕ್ಷೆ ಬಗ್ಗೆ ಗೊಂದಲದ ಹೇಳಿಕೆ ಕೊಟ್ಟಿದ್ದಾರೆ. ಶಿಕ್ಷಣ ಸಚಿವರು, ಪ್ರವೇಶ ಪರೀಕ್ಷೆಯನ್ನು ಮಾಡಿಯೇ ಮಾಡುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ಸ್ಪಷ್ಟೀಕರಣ ಬೇಕು.

ಅಧ್ಯಕ್ಷರು : ನಿನ್ನೆ ಈ ವಿಚಾರದಲ್ಲಿ ಹೇಳಿದ್ದಾರೆ. ಈಗ ಶಿಕ್ಷಣ ಸಚಿವರು ಇಲ್ಲಿಯೇ ಇದ್ದಾರೆ, ಮತ್ತೆ ಕ್ಲಾರಿಫೈ ಮಾಡುತ್ತಾರೆ, ತಾವು ಕುಳಿತುಕೊಳ್ಳಿ.

ಶ್ರೀ ಸುರೇಶ್‌ಕುಮಾರ್ : ''ಪರಿಶೀಲನೆಯಲ್ಲಿದೆ'' ಎಂದು ಹೇಳಿದ್ದಾರೆ. ಪಿ.ಯು.ಸಿ. ಪರೀಕ್ಷೆಗೂ ಮತ್ತು ಸಾಮಾನ್ಯ ಪ್ರವೇಶ ಪರೀಕ್ಷೆಗೂ ಸಂಬಂಧ ಇಲ್ಲ.